## 76

# “ಆತನು ಅಲ್ಲಿಂದ ಹೊರಟನು” (2)

### ಓದುವ ಮನೆಪಾಠ #32

VII. ಯೇಸುವಿನ ಸೇವೆಯ ಅಂತಿಮ ವಾರ (ಮುಂದುವರೆಯುವದು).

E. ಮಂಗಳವಾರ: “ಪ್ರಶ್ನೆಗಳ ಮಹಾದಿನ” (ಮುಂದುವರೆಯುವದು).

7. ಯೆರೂಸಲೇಮಿನ ನಾಶನ ಹಾಗೂ ಎರಡನೇ ಬರೋಣದ ಕುರಿತ ಚರ್ಚೆ (ಮುಂದುವರೆಯುವದು).

b. ಯೆರೂಸಲೇಮಿನ ನಾಶನದ ಕುರಿತ ಬೋಧನೆಗಳು (ಮುಂದುವರೆಯುವದು).

(2) ಯೆರೂಸಲೇಮಿನ ನಾಶನಕ್ಕೆ ಸಂಬಂಧಿಸಿದ ಘಟನೆಗಳು (ಮತ್ತಾಯ 24:15-35; ಮಾರ್ಕ 13:14-31; ಲೂಕ 21:20-36).

c. ಎರಡನೇ ಬರೋಣದ ಕುರಿತ ಬೋಧನೆ.

(1) ಸಾಮಾನ್ಯ ಬೋಧನೆ.

(a) ಎರಡನೇ ಬರೋಣವನ್ನು ತಿಳಿಸಲಿಲ್ಲ (ಮತ್ತಾಯ 24:36-41; ಮಾರ್ಕ 13:32).

(b) ಸಿದ್ಧವಾಗಬೇಕೆಂಬ ಕೋರಿಕೆ (ಮತ್ತಾಯ 24:42-51; ಮಾರ್ಕ 13:33-37).

### ಪರಿಚಯ

ಹಿಂದಿನ ಪಾಠದಲ್ಲಿ ಮತ್ತಾಯ 24 ಹಾಗೂ ಮಾರ್ಕ ಹಾಗೂ ಲೂಕನಲ್ಲಿರುವ ಸಂಬಂಧಿಸಿದ ಭಾಗಗಳನ್ನು ಚರ್ಚಿಸಿದ್ದೇವೆ. ಮತ್ತಾಯ 24:4-14ರಲ್ಲಿರುವ ನೈಸರ್ಗಿಕ ವಿಕೋಪ, ಹಿಂಸೆ, ಹಾಗೂ ಇತರೆ ಸಂಗತಿಗಳನ್ನು ನೋಡಿದೆವು. ಕರ್ತನ ಬರೋಣದ ದಿನವನ್ನು ನಿಗದಿಪಡಿಸುವ ಈ ಭಾಗವನ್ನು ಅನೇಕರು ಬಳಸುತ್ತಾರೆ. “ಕರ್ತನ ಬರೋಣವು ಹತ್ತಿರವಾಯಿತು!” ಎಂದು ಒತ್ತಿ ಹೇಳುವ ಇವರು ಎರಡು ಘಟನೆಗಳನ್ನು ನಿರ್ಲಕ್ಷ್ಯ ಮಾಡಿದ್ದಾರೆ:

(1) ಈ ಸಂಘಟನೆಗಳು ಅಂತ್ಯಕಾಲದ ಸೂಚನೆಗಳಲ್ಲ. ಅದು ಸೂಚನೆಯೇ ಅಲ್ಲ. ಅಂಥವುಗಳು ಯಾವಾಗಲೂ ಸಂಭವಿಸುತ್ತದೆ. ಅವುಗಳು ಒಂದನೆ, ಎರಡನೇ, ಮೂರನೇ, ಹಾಗೂ ಈಗಿನವರೆಗೂ ಸಂಭವಿಸುವ ಸಂಗತಿಗಳಾಗಿವೆ. ಅವುಗಳು ನಿಗೂಡವೂ ಅಲ್ಲ.

(2) ಅಧ್ಯಾಯದಲ್ಲಿ ದಾಖಲಾಗಿರುವ ವಿಚಾರಗಳು ಎರಡನೇ ಬರೋಣದ ಕುರಿತಾಗಿ ಇರೊದೆಲ್ಲ, ಯೆರೂಸಲೇಮಿನ ನಾಶನದ ಕುರಿತಾಗಿದೆ.[1] ಎರಡನೇ ಬರೋಣದ ವಿಚಾರಕ್ಕಾಗಿ ಮತ್ತಾಯ 24:4-15ನ್ನು ಹೇಳುವವನು ಅದರ ಹಿನ್ನಲೆಯನ್ನು ನಿರ್ಲಕ್ಷಿಸಲಿ.

ಯೆರೂಸಲೇಮಿನ ನಾಶನದ ಕುರಿತು ಕರ್ತನು ನೀಡಿರುವ “ಸೂಚನೆ”ಗಳ ಕುರಿತು ಈ ಪಾಠದಲ್ಲಿ ಚರ್ಚಿಸೋಣ. ನಾಶನದ ಪ್ರಕಟನೆಯನ್ನು ಸಹ ಗಮನಿಸೋಣ. ಎರಡನೇ ಬರೋಣದ ಕುರಿತು ಆತನ ಕೇಳುಗರು ಕೇಳಿದ ಪ್ರಶ್ನೆಗೆ ಆತನ ಉತ್ತರವನ್ನು ಗಮನಿಸಿ.

## ಯೆರೂಸಲೇಮಿನ ನಾಶನ

## (ಮತ್ತಾಯ 24:15-35; ಮಾರ್ಕ 13:14-31; ಲೂಕ 21:20-36)

### ನಿಜವಾದ ಸೂಚನೆಗಳು

### (ಮತ್ತಾಯ 24:15, 16; ಮಾರ್ಕ 13:40ಎ; ಲೂಕ 21:20)

ಯೆರೂಸಲೇಮಿನ ನಾಶನವನ್ನು ಸೂಚಿಸುವ ನೇರವಲ್ಲದ ಸಂಗತಿಗಳ ಪಟ್ಟಿಯನ್ನು ಆತನು ನೀಡಿ, ಆತನ ಶಿಷ್ಯರು ಎದುರು ನೋಡಬೇಕಾದ ಸೂಚನೆಗಳನ್ನು ನೀಡಿದನು. "ಆದದರಿಂದ ಪ್ರವಾದಿಯಾದ ದಾನಿಯೇಲನು ಹೇಳಿದಂಥ ಹಾಳುಮಾಡುವ ಅಹಸ್ಯ ವಸ್ತುವು ಪವಿತ್ರಸ್ಥಾದಲ್ಲಿ ನಿಂತಿರುವದನ್ನು ನೀವು ಕಾಣುವಾಗ (ಇದನ್ನು ಓದುವವನು ತಿಳುಕೊಳ್ಳಲಿ) ಯೂದಾಯದಲ್ಲಿರುವವರು ಬೆಟ್ಟಗಳಿಗೆ ಓಡಿಹೋಗಲಿ" (ಮತ್ತಾಯ 24:15, 16). ಮಾರ್ಕನು ಇದನ್ನು, "ಇದಲ್ಲದೆ ಹಾಳು ಮಾಡುವ ಅಸಹ್ಯ ವಸ್ತವು ನಿಲ್ಲಬಾರದ ಸ್ಥಳದಲ್ಲಿ ನಿಂತಿರುವದನ್ನು ನೀವು ಕಾಣುವಿರಿ" (ಮಾರ್ಕ 13:14ಎ).

ಈ ಅಸಹ್ಯವಾದ ವಸ್ತುವಿನ ಬಗ್ಗೆ ಭಾವೋದ್ರೇಕದ ಜನರು ಆನಂದಿಸುತ್ತಾರೆ. ಆದರೆ ಲೂಕನಲ್ಲಿರುವ ಸುವಾರ್ತೆಯ ಪ್ರೇರಿತವಾದ ಪ್ರೇರಣೆಯನ್ನು ನೀಡುತ್ತದೆ. "ಆದರೆ ದಂಡುಗಳು *ಯೆರೂಸಲೇಮ್ ಪಟ್ಟಣಕ್ಕೆ ಮುತ್ತಿಗೆ* ಹಾಕಿರುವದನ್ನು ನೀವು ಕಾಣುವಾಗ ಅದು ಹಾಳಾಗುವ ಕಾಲ ಸಮೀಪವಾಯಿತೆಂದು ತಿಳುಕೊಳ್ಳಿರಿ" (ಲೂಕ 21:20). ಕ್ರಿ.ಶ. 60ರ ಅಂತ್ಯದಲ್ಲಿ ರೋಮನ್ನರು ಸೈನ್ಯದವರು ಯೆರೂಸಲೇಮನ್ನು ಸುತ್ತುವರೆದಿದ್ದರು.

ಈ "ಅಸಹ್ಯದ ವಸ್ತುವಿನ" ಬಗ್ಗೆ ದಾನೀಯೇಲನು ಬರೆದಿರುವದನ್ನು ಎಂದು ಯೇಸು ನೆನಪಿಸಿದನು. ಈ ಎರಡು ಅಂಶಗಳ ಬಗ್ಗೆ ದಾನಿಯೇಲನ ಗ್ರಂಥದಲ್ಲಿ ಅನೇಕ ಬಾರಿ ಹೇಳ ಲಾಗಿದೆ (9:26, 27; 11:31; 12:11). ದಾನಿಯೇಲ 11:31 ಮತ್ತು 12:11ರಲ್ಲಿ ಸೆಲ್ಯೂಸಿಡ್‌ನ ಅರಸನಾದ ಅಂತಿಯೋಕ್ಯದ ಎಪಿಫಾನೇಸನು ಯೆರೂಸಲೇಮಿನಲ್ಲಿ ಅನ್ಯಜನರ ಹಕ್ಕನ್ನು ಪರಿಚಯಿಸಿ ಮೆಕ್ಕಬೀನರು ದಂಗೆ ಏಳುವಂತೆ ಮಾಡಿದನು (ಕ್ರಿ.ಪೂ. 167)[2] 9:26, 27ರ ಪ್ರಕಾರ ರೋಮಾನ್ನರು ಯೆರೂಸಲೇಮನ್ನು ನಾಶಮಾಡಿದರು ಎಂದು ನೇರವಾಗಿ ಹೇಳು ತ್ತದೆ. ಜನರು ಮೆಸ್ಸೀಯನನ್ನು ತಿರಸ್ಕಾರ ಮಾಡಿದ ಕಾರಣಪಟ್ಟಣ ಹಾಗೂ ದೇವಾಲಯ ನಾಶವಾಯಿತು ಎಂದು ನೋಡಿ ವಚನ 9 ಪ್ರವಾದಿಸುತ್ತದೆ. "ಅರವತ್ತೆರಡು ವಾರಗಳಾದ ಮೇಲೆ ಅಭಿಷಕ್ತನೊಬ್ಬನು ಛೇದಿಸಲ್ಪಡುವನು; ಅವನಿಗೆ ಏನೂ ಇರದು; ನುಗುವ ಪ್ರಭುವಿನ ಜನರು ಪಟ್ಟಣವನ್ನೂ ಪವಿತ್ರಾಲಯವನ್ನೂ ಹಾಳು ಮಾಡುವರು; ತುಂಬಿತುಳುಕುವ ಪ್ರಳಯವು ಪಟ್ಟಣವನ್ನು ಕೊನೆಗಾಣಿಸುವದು; ಅಂತ್ಯದವರೆಗೂ ಯುದ್ಧವಾಗುವದು, ನಿಶ್ಚಿತನಾಶನಗಳು ಸಂಭವಿಸುವವು" (ದಾನಿಯೇಲ 9:26).[3] ಇದರ ಕುರಿತು ಡೇವಿಡ್ ಲಿಚಿನ್‌ರವರು ಬರೆದು:

> "ಅಸಹ್ಯವಾದದ್ದು ಪರಿಶುದ್ಧ ಸ್ಥಳದಲ್ಲಿ ನಿಲ್ಲುವದು" ಅಂದರೆ ಕ್ರಿ.ಶ. 70ರಲ್ಲಿ, ರೋಮನ್ನರ ಸೈನ್ಯಾಧಿಕಾರಿಯಾದ, ಟೈಟಸನು ("ಪ್ರಿನ್ಸ್"; 9:26ಬಿ) ಯೆರೂಸಲೇ ಮನ್ನು ನಾಶಮಾಡಿದನು ...
>
> ರೋಮನ್ನರು ವಿಗ್ರಹಾರಾಧಕರಾಗಿದ್ದರಿಂದ, ದಾನಿಯೇಲನ ಪ್ರಕಾರ ದಾವೀದನ ಪಟ್ಟಣವನ್ನು ಅಶುದ್ಧಮಾಡಿದರು.[4] ಇಬ್ರಿಯ ಜನಾಂಗವು ನಾಶವಾನವಾದದ್ದು ದಾನಿಯೇಲನ ಪ್ರವಾದನೆಯ ಪ್ರಕಾರವಾಯಿದೆಂದು ಯೂದರು ಸಹ ಗುರುತಿಸಿದರು. ಚರಿತ್ರೆಕಾರನಾದ ಯೋಸೇಫಸನು "ದಾನಿಯೇಲನು ರೋಮಾಯರ ಸರಕಾರದ ಕುರಿತು ಮತ್ತು ನಮ್ಮ ದೇಶವನ್ನು ನಾಶಮಾಡುವದರ"[5] ಕುರಿತು ಹೇಳಿದನು.

**ನಿಜವಾದ ಸೂಚನೆ ಬರುವಾಗ ಏನು ಮಾಡಬೇಕು**

**(ಮತ್ತಾಯ 24:16-20; ಮಾರ್ಕ 13:14ಬಿ-18; ಲೂಕ 21:21, 23)**

ಸೈನ್ಯಗಳು ಯೆರೂಸಲೇಮನ್ನು ಸುತ್ತುವರೆದಿರುವಾಗ, ಯೇಸುವಿನ ಅನುಯಾಯಿಗಳು ಸುರಕ್ಷೆಯ ಸ್ಥಳಕ್ಕೆ ಹೋಗಬೇಕಿತ್ತು (ಮತ್ತಾಯ 24:16; ನೋಡಿ ಮಾರ್ಕ 13:14ಬಿ; ಲೂಕ 21:21ಎ) ಈ ಕುರಿತು ಕ್ರಿಸ್ತನು, "ಮಾಳಿಗೆಯ ಮೇಲೆ ಇರುವವನು ತನ್ನ ಮನೆಯೊಳಗಿರುವದನ್ನು ತೆಗೆದು ಕೊಳ್ಳುವದಕ್ಕೆ ಇಳಿಯದೆ, ಹೊಲದಲ್ಲಿರುವವನು ತನ್ನ ಹೊದಿಕೆಯನ್ನು ತೆಗೆದುಕೊಳ್ಳುವದಕ್ಕೆ ಹಿಂತಿರುಗಿ ಬಾರದೆ ಓಡಿಹೋಗಲಿ" (ಮತ್ತಾಯ 24:17, 18; ನೋಡಿ ಮಾರ್ಕ 13:15, 16; ಲೂಕ 21:21ಬಿ). ಇನ್ನೊಂದು ಅರ್ಥದಲ್ಲಿ, "ನೀನು ಪಟ್ಟಣದಲ್ಲಿರುವಾಗ, ಈ ಸಂದರ್ಭದಲ್ಲಿ ಅಗತ್ಯವಿರುವ ವಸ್ತುಗಳನ್ನು ತೆಗೆದುಕೊಳ್ಳುವ ಅಗತ್ಯವಿಲ್ಲ. ನೀನು ಪಟ್ಟಣದ ಹೊರಗೆ ಇದ್ದರೆ, ಮನೆಗೆ ಹಿಂದಿರುಗುವ ಅಗತ್ಯವಿಲ್ಲ. ಯೆರೂಸಲೇಮಿನಿಂದ ಶೀಘ್ರವೇ ಹೊರಹೋಗು!"

"ಆದರೆ ಆ ದಿನಗಳಲ್ಲಿ ಬಸುರಿಯರಿಗೂ ಮೊಲೆಕೂಸಿರುವ ಹೆಂಗಸರಿಗೂ ಆಗುವ ಕಷ್ಟವನ್ನು ಏನು ಹೇಳಲಿ!" (ಮತ್ತಾಯ 24:19; ನೋಡಿ ಮಾರ್ಕ 13:17; ಲೂಕ 21:23ಎ). ಗರ್ಭದರಿಸಿರುವವರು, ಚಿಕ್ಕಮಕ್ಕಳನ್ನು ಹೊಂದಿರುವವರು ಕಷ್ಟ ಅನುಭವಿಸುವರು.[6] "ಅದು ಚಳಿಗಾಲದಲ್ಲಿ ಅಥವಾ ಸಬ್ಬತ್ತಿನಲ್ಲಿ" ನಡೆಯದಂತೆ ಪ್ರಾರ್ಥಿಸಿರಿ (ಮತ್ತಾಯ 24:20; ನೋಡಿ ಮಾರ್ಕ 13:18). ಸಬ್ಬತ್ತಿನಲ್ಲಿ[7] ಪಟ್ಟಣದ ಬಾಗಿಲುಗಳು ಮುಚ್ಚಿರುತ್ತವೆ. ಚಳಿಗಾಲದ ಪ್ರಯಾಣ ಹಿತವಾಗಿರುವದಿಲ್ಲ. (ಕ್ರೈಸ್ತರು ಪ್ರಾರ್ಥನೆ ಮಾಡಿದ್ದರಿಂದ ರೋಮನ್ನರು ವಸಂತಕಾಲದಲ್ಲಿ ಬಂದರು.)

ಹಿಂದಿನ ಪಾಠದ ಒಂದು ಅಂಶವನ್ನು ಪುನ ಹೇಳುತ್ತೇನೆ: ಸ್ಥಳ, ಗರ್ಭಿಣಿ, ಅಥವಾ ಕಾಲ, ಅಥವಾ ವಾರದ ದಿನಕ್ಕೂ ಎರಡನೆ ಬರೋಣಕ್ಕೂ ಸಂಬಂಧವೇನು? ಏನೂ ಇರುವದಿಲ್ಲ. ಯೆರೂಸಲೇಮಿನಿಂದ ಹೊರ ಹೋಗಲು ಇವುಗಳು ಗುರುತಿನ ಸೂಚನೆ.

ಮತ್ತಾಯ ಹಾಗೂ ಮಾರ್ಕ ಇಬ್ಬರ ದಾಖಲೆಗಳಂತೆ, "ಓದುವವನು ಇದನ್ನು ಅರ್ಥ ಮಾಡಿಕೊಳ್ಳಲಿ" (ಮತ್ತಾಯ 24:15; ಮಾರ್ಕ 13:14). ಇನ್ನೊಂದು ಇತಿಹಾಸದಂತೆ, ಯೇಸುವಿನ ನಾಶನದಿಂದ ತಪ್ಪಿಸಿಕೊಂಡರು. ರೋಮಾಯರ ಸೈನ್ಯವು ಹತ್ತಿರ ಬರುವಾಗ ಕೆಲವರು ತಪ್ಪಿಸಿಕೊಂಡಿರಬಹುದು, ಕೆಲವರು ಅಕ್ರಮಣ ಮುಗಿದ ನಂತರ ತಪ್ಪಿಸಿಕೊಂಡಿರಬಹುದು:

> ಕ್ರಿ.ಶ. 300ರಲ್ಲಿ ಜೀವಿಸಿದ್ದ ಯೋಸೆಬಸನು ಒಂದು ದೃಷ್ಟಾಂತವನ್ನು ಹೇಳಿದ್ದಾನೆ. ಯೆರೂಸಲೇಮಿನಲ್ಲಿ, ಒಂದು ನಿಗದಿತ ಕಾಲದಲ್ಲಿ ಮುತ್ತಿಗೆಯನ್ನು ತೆಗೆದು ಹಾಕಲಾಗಿತ್ತು.[8] ವಿಟೇಲ ಚಕ್ರವರ್ತಿಯು ಮರಣ ಹೊಂದಿ, ಯೆರೂಸಲೇಮನ್ನು ನಾಶಮಾಡಲು ವೆಸ್ ಪಾಸಿಯನ್‌ಗೆ ಅಧಿಕಾರ ನೀಡಲಾಗಿತ್ತು. ಅವನು ವಿಟೇಲನ ಬದಲಾಗಿ ಚಕ್ರವರ್ತಿಯಾದನು. ನಂತರ ಅವನ ಮಗನಾದ ತೀತನು ಮುತ್ತಿಗೆ ಹಾಕುವ ಅಧಿಕಾರಿಯಾದನು. ಈ ಸಮಯದಲ್ಲಿ ಅಲ್ಲಿ ಅಲ್ಪಕಾಲ ವಿರಾಮ ಘೋಷಿಸಿದ್ದರು. ಆಗ ಕ್ರೈಸ್ತರು ಯೆರೂಸಲೇಮಿನಿಂದ ತಪ್ಪಿಸಿಕೊಂಡು, ಯೋರ್ದಾನ್ ಹೊಳೆಯ ಆಚೆಯಿಂದ ಪೆಲ್ಲ ಎಂಬ ಸ್ಥಳಕ್ಕೆ ಹೋಗುವ ಅವಕಾಶವಿತ್ತು. ಈ ವಿಧವಾಗಿ ಅವರು ಕೆಟ್ಟ ನಾಶನದಿಂದ ತಪ್ಪಿಸಿಕೊಂಡರು. ಯೋಸೆಬಸನ ಪ್ರಕಾರ ಈ ಸಂದರ್ಭದಲ್ಲಿ ಕ್ರೈಸ್ತರ್‍ಯಾರೂ ನಾಶವಾಗಲಿಲ್ಲ.[9]

**ಮುಂದೆ ಬರುವುದಕ್ಕಿದ್ದ ಘಟನೆಯ ಸ್ವರೂಪ**

**(ಮತ್ತಾಯ 24:21-28; ಮಾರ್ಕ 13:19-23; ಲೂಕ 21:22-24)**

ಮತ್ತಾಯ 24ರ ಮುಂದಿನ ಭಾಗದಲ್ಲಿ ಯೆರೂಸಲೇಮಿನ ನಾಶನದ ಕುರಿತಾಗಿದೆ. ಅದು

ಭಯಂಕರವಾದದ್ದು ಎಂದು ಯೇಸು ತಿಳಿಸಿದನು:

> ಅಂಥ ಸಂಕಟವು ಲೋಕ ಹುಟ್ಟಿದ್ದು ಮೊದಲುಗೊಂಡು[10] ಇಂದಿನವರೆಗೂ ಆಗಲಿಲ್ಲ. ಇನ್ನು ಮೇಲೆಯೂ ಆಗುವದಿಲ್ಲ. (ಕರ್ತನು) ಆ ದಿನಗಳನ್ನು ಕಡಿಮೆಮಾಡದಿದ್ದರೆ ಒಂದು ನರಪ್ರಾಣಿಯಾದರೂ ಉಳಿಯದು;[11] ಆದರೆ ತಾನು ಆದುಕೊಂಡವರಿಗೋಸ್ಕರ ಆ ದಿನಗಳನ್ನು ಕಡಿಮೆಮಾಡುವನು (ಮತ್ತಾಯ 24:21, 22; ನೋಡಿ ಮಾರ್ಕ 13:19, 20).

ಪುನಃ ಆತನು:

> ... ಯಾಕಂದರೆ ಬರೆದಿರುವದೆಲ್ಲಾ ನೆರವೇರುವದಕ್ಕಾಗಿ ಅವು ದಂಡನೆಯ ದಿವಸಗಳಾ ಗಿವೆ.[12] ಆ ದಿನಗಳಲ್ಲಿ ಬಸುರಿಯರಿಗೂ ಮೊಲೆಕೂಸಿರುವ ಹೆಂಗಸರಿಗೂ ಆಗುವ ಕಷ್ಟವನ್ನು ಏನು ಹೇಳಲಿ! ಈ ಸೀಮೆಯ ಮೇಲೆ ಮಹಾವಿಪತ್ತೂ ಈ ಜನರಿಗೆ ಉಗ್ರದಂಡನೆಯೂ ಆಗುವವು. ಅವರು ಕತ್ತಿಯ ಬಾಯಿಗೆ ಬೀಳುವರು; ಅವರನ್ನು ಅನ್ಯದೇಶಗಳಿಗೆಲ್ಲಾ ಸೆರೆಹಿಡಿದುಕೊಂಡು ಹೋಗುವರು; ಅನ್ಯದೇಶದವರ ಸಮಯಗಳು ಪೂರೈಸುವ ತನಕ ಯೆರೂಸಲೇಮ್ ಪಟ್ಟಣವು ಅನ್ಯ ದೇಶದವರಿಂದ[13] ತುಳಿದಾಡಲ್ಪಡುತ್ತಿರುವದು (ಲೂಕ 21:22-24).

ಇದು ತೀವ್ರವಾದದ್ದಾದರೂ, ಆತನ ಪ್ರವಾದನೆಯು ಇತಿಹಾಸದಲ್ಲಿ ನೆರವೇರಿತು.

ಅನೇಕ ವರ್ಷಗಳ ಕಾಲ ಯೆರೂಸಲೇಮು ಮುತ್ತಿಗೆಗೆ ಒಳಪಟ್ಟಿತು. ಪಸ್ಕದ ಹಾಗೂ ರೋಮನ್ನರು ಅತಿಕ್ರಮಣಮಾಡುವಾಗ, ಅದಕ್ಕೆ ಮುತ್ತಿಗೆ ಹಾಕಿದರು. ಮುತ್ತಿಗೆಗೆ ಒಳಗಾಗಿದ್ದವರು, ಸಂರಕ್ಷಣೆಯ ಅಗತ್ಯ ಹೊಂದಿದ್ದರು.[14] ಅಂತಿಮವಾಗಿ, ಕ್ರಿ.ಶ. 70ರಲ್ಲಿ ತೀತನು ಯೆರೂಸಲೇಮನ್ನು ಅತಿಕ್ರಮಣ ಮಾಡಿದನು. ಆಗ ಪಟ್ಟಣದಲ್ಲಿದ್ದ ರೋಮನ್ನರು ಸಾವಿರಾರು ಯೆಹೂದ್ಯರನ್ನು ಕೊಂದು ಹಾಕಿದರು.[15] ಯೋಸೇಫಸನ ಪ್ರಕಾರ, "ಶಿಲುಬೆಗಳಿಗೆ ಕೊಠಡಿಯ ಹಾಗೂ ಶಿಲುಬೆಗೆ ದೇಹಗಳ ಕೊರತೆ ಬರುವವರೆಗೆ"[16] ಜನರಿಗೆ ಹಿಂಸೆ ಶಿಲುಬೆಗೆ ಹಾಕಿದರು. "ಇದರಿಂದ ಆ ಸ್ಥಳದಲ್ಲಿದ್ದ ಯೆಹೂದ್ಯರ್‍ಯಾರು ಬದುಕಲಿಲ್ಲ."[17]

ರೋಮನ್ನರು ಪಟ್ಟಣವನ್ನು, ದೇವಾಲಯವನ್ನೂ ನಾಶಮಾಡಿ ಸುಟ್ಟು ಹಾಕಿದರು (ನೋಡಿ ಮತ್ತಾಯ 22:7). ಬೆಂಕಿಯು ದೇವಾಲಯದ ಬಂಗಾರವನ್ನೆಲ್ಲಾ ಕರಗಿಸಿ ಬಿಟ್ಟಿತು.[18] ಸೈನಿಕರು ಆ ವಸ್ತುಗಳನ್ನು ಪಡೆಯುವ ಸಲುವಾಗಿ, ಅಡಿಪಾಯದ ಪ್ರತಿಯೊಂದು ಕಲ್ಲನ್ನು ತೆಗೆದು ಹಾಕಿದರು. ಅದು ಯೇಸುವಿನ ಮಾತಿನ ಪ್ರಕಾರ, "ಇಲ್ಲಿ ಕಲ್ಲಿನ ಮೇಲೆ ಕಲ್ಲು ಉಳಿಯುವದಿಲ್ಲ" ಎಂದು ಹೇಳಿದ್ದನು (ಮತ್ತಾಯ 24:2). ಆದರೆ ದೇವಾಲಯದ "ಒಂದೇ ಒಂದು ಕಲ್ಲನ್ನು" ಪುರಾತನ ವಸ್ತು ಶಾಸ್ತ್ರಜ್ಞರು ಗುರುತಿಸಿದ್ದಾರೆ.[19] ಜನರು ಅಲ್ಲಿಗೆ ಹೋದರೆ ದೇವಾಲಯವಿದ್ದ ಸ್ಥಳದಲ್ಲಿ ದೇವಾಲಯವಿತ್ತು ಎಂದು ಸಂಶಯಪಡುತ್ತಾರೆ.[20]

ಈ ಅಘಾತದ ನಡುವೆ, "ಕ್ರಿಸ್ತ ವಿರೋಧಿಯು" ಸಹ ಎದ್ದು ಒಂದು ಸುಳ್ಳು ಭರವಸೆಯನ್ನು ನೀಡುವನು ಎಂದು ಯೇಸು ಹೇಳಿದನು (ಮತ್ತಾಯ 24:23-25[21]; ಮಾರ್ಕ 13:21-23). ಆಗ ಜನರು "ಕ್ರಿಸ್ತನು ಇಲ್ಲಿದ್ದಾನೆ, ಅಲ್ಲಿದ್ದಾನೆ" ಎಂದು ಹೇಳಿದರೆ, ಅದನ್ನು ನಂಬಬೇಡಿರಿ (ಮತ್ತಾಯ 24:26). ಆತನ ಕಡೇಯ ಬರೋಣದಲ್ಲಿ, ಯಾವ ವಿಧವಾದ ಪ್ರಕಟನೆಯ ಅಗತ್ಯವಿರುವದಿಲ್ಲ, ಯಾಕಂದರೆ ಎಲ್ಲರಿಗೂ ಅದು ಗೋಚರವಾಗಿರುತ್ತದೆ! "ಹೇಗೆ ಮಿಂಚು ಮೂಡಣದಲ್ಲಿ ಹುಟ್ಟಿ ಪಡುವಣದ ವರೆಗೂ ಕಾಣಿಸತ್ತದೋ ಹಾಗೆಯೇ ಮನುಷ್ಯಕುಮಾರನ ಪ್ರತ್ಯಕ್ಷತೆಯು ಇರುವದು" (ಮತ್ತಾಯ 24:27; ನೋಡಿ ಪ್ರಕಟನೆ 1:7).[22]

ಕ್ರಿಸ್ತ ವಿರೋಧಿಯು ಸುಳ್ಳು ಭರವಸೆ ನೀಡುತ್ತಾನೆ, ಯಾಕಂದರೆ ಯೆರೂಸಲೇಮಿನ ಭವಿಷ್ಯವು ಗುಪ್ತವಾಗಿರುತ್ತದೆ. ಯೆಹೂದ್ಯರು ದೇವರ ಕಡೆಗೆ ತಿರುಗಿಕೊಳ್ಳುವ ಅವಕಾಶವನ್ನು ನೀಡಲಾಗುತ್ತದೆ. ಅವರಿಗೆ ಸುವಾರ್ತೆ ಸಾರೋಣವಾಗುತ್ತದೆ (ರೋಮಾಪುರ 1:16);

ಆದರೆ ಅವರು ದೇವರ ಕರುಣೆಯನ್ನು ತಿರಸ್ಕರಿಸುವರು. ಯೆರೂಸಲೇಮಿನ ನಾಶನದಿಂದ, ದೇವರಿಗೂ ಮತ್ತು ಒಂದು ಜನಾಂಗಕ್ಕೂ ಇದ್ದ ನಡುವಿನ ಸಂಬಂಧ ಅಂತ್ಯವಾಯಿತು ಎಂದು ತಿಳಿದು ಬರುತ್ತದೆ. ಆದ್ದರಿಂದ ಆ ಮಹಾ ಘನವೈದ್ಯನು "ರೋಗಿಯ ಮರಣ ಹೊಂದಿದನು" ಎಂದು ಪ್ರಕಟಿಸಿದನು, "ಹೆಣ ಬಿದ್ದಲ್ಲಿ ಹದ್ದುಗಳು[23] ಕೂಡುವವು" (ಮತ್ತಾಯ 24:28).

**ತಕ್ಷಣವೇ ಬರಬಹುದಾದ ಘಟನೆಗಳು**

**(ಮತ್ತಾಯ 24:29-31; ಮಾರ್ಕ 13:24-27; ಲೂಕ 21:25-28)**

ಈಗ ಕಷ್ಟಕರವಾದ ಅಧ್ಯಾಯಕ್ಕೆ ಬಂದಿದ್ದೇವೆ:

> ಆ ದಿನಗಳ ಸಂಕಟವು ತೀರಿದಕೂಡಲೆ ಸೂರ್ಯನು ಕತ್ತಲಾಗಿ ಹೋಗುವನು, ಚಂದ್ರನು ಬೆಳಕುಕೊಡದೆ ಇರುವನು, ನಕ್ಷತ್ರಗಳು ಆಕಾಶದಿಂದ ಉದುರುವವು, ಆಕಾಶದ ಶಕ್ತಿಗಳು ಕದಲುವವು. ಆಗ ಮನುಷ್ಯಕುಮಾರನನ್ನು ಸೂಚಿಸುವ ಗುರುತು ಆಕಾಶದಲ್ಲಿ ಕಾಣಬರುವದು. ಆಗ ಭೂಲೋಕದಲ್ಲಿರುವ ಎಲ್ಲಾ ಕುಲದವರು ಎದೆಬಡಕೊಳ್ಳುವರು, ಮತ್ತು ಮನುಷ್ಯ ಕುಮಾರನು ಬಲದಿಂದಲೂ ಬಹು ಮಹಿಮೆಯಿಂದಲೂ ಆಕಾಶದ ಮೇಘಗಳ ಮೇಲೆ ಬರುವದನ್ನು ಕಾಣುವರು. ಮತ್ತು ಆತನು ತುತೂರಿಯ ಮಹಾ ಶಬ್ದದಿಂದ ತನ್ನ ದೂತರನ್ನು ಕಳುಹಿಸುವನು. ಅವರು ಆತನು ಆದುಕೊಂಡವರನ್ನು ಆಕಾಶದ ಒಂದು ಕಡೆಯಿಂದ ಮತ್ತೊಂದು ಕಡೆಯ ವರೆಗೆ ನಾಲ್ಕು ದಿಕ್ಕುಗಳಿಂದ ಒಟ್ಟು ಗೂಡಿಸುವರು (ಮತ್ತಾಯ 24:29-31; ನೋಡಿ ಮಾರ್ಕ 13:24-27; ಲೂಕ 21:25-28).

ಇದರಲ್ಲಿ ಎರಡನೇ ಬರೋಣದ ಹೇಳಿಕೆಗಳಿವೆ. ಯೇಸು ತನ್ನ ಚರ್ಚೆಯನ್ನು ವಿಷಯದಿಂದ, ವಿಷಯಕ್ಕೆ ಬದಲಿಸಿದನು ಎಂದು ಕೆಲವರು ನಂಬುತ್ತಾರೆ. ಒಂದು ವೇಳೆ, ಆತನು ಅಲ್ಲಿನ ಘಟನೆಯನ್ನು ವಿವರಿಸಿರಬಹುದು. ಆದರೆ "ಈ ಎಲ್ಲಾ ಸಂಗತಿಗಳು" ಎಂಬುದರಲ್ಲಿ ಮತ್ತಾಯ 24:34, 29ರಿಂದ 31 ಒಳಗೊಂಡಿರುತ್ತದೆ.

ಯೆಹೂದ್ಯರು ಪ್ರಕಟಣೆಯ ಹೇಳಿಕೆಗಳನ್ನು ಅರಿತ್ತಿದ್ದರು.[24] ಮತ್ತಾಯ 24:29-31ನ್ನು ಇತರೆ ಗಟನಾವಳಿಗಳಲ್ಲಿ ಬಳಸಲಾಗಿದೆ. ಅರಸ ನಾಶನದ ಸೂಚನೆಗಾಗಿ ಸೂರ್ಯ, ಚಂದ್ರ, ನಕ್ಷತ್ರಗಳ ಸಂಕೇತಗಳನ್ನು ಬಳಸಲಾಗಿದೆ (ಈ ದಿನಗಳಲ್ಲಿ ಬಳಸುವಂತೆ):

- ಬಾಬಿಲೇಮಿನ ಕುರಿತು ಸಂಕೇತವನ್ನು ಬಳಸಿದೆ (ಯೆಶಾಯ 13:1, 9-11).
- ಎದೋಮಿನ ನಾಶನಕ್ಕೆ ಕುರಿತು ಸಂಕೇತವನ್ನು ಬಳಸಿದೆ (ಯೆಶಾಯ 34:4, 5).
- ಫರೋಹನ ಅಪಜಯಕ್ಕೆ ಕುರಿತು ಸಂಕೇತವನ್ನು ಬಳಸಿದೆ (ಯೆಹೆಜ್ಕೇಲನು 32:2, 7, 8).[25]

ಕರ್ತನ ಬರೋಣದಲ್ಲಿ, ಮನುಷ್ಯರಲ್ಲಿ ಸಾಮಾನ್ಯವಾದ ಉದ್ದೇಶಗಳನ್ನು ತಿಳಿಸಲಾಗಿದೆ:

- ಐಗುಪ್ತದ ನಾಶನಕ್ಕೆ ದೇವರು ಬಂದನು (ಯೆಶಾಯ 19:1).
- ಆತನು ಸತ್ತು ಹೂಣಲ್ಪಟ್ಟು, ಎದ್ದು ಬಂದು ನಂತರ, ಪಂಚಾಶತ್ತಮ ದಿನದಂದು ತನ್ನ ರಾಜ್ಯ/ಸಭೆಯನ್ನು ಸ್ಥಾಪಿಸುವನೆಂಬ ವಾಗ್ದಾನ (ಅಪೊಸ್ತಲರ ಕೃತ್ಯಗಳು 2) (ಮತ್ತಾಯ 16:28ನ್ನು ಮಾರ್ಕ 9:1ರೊಂದಿಗೆ ಹೋಲಿಸಿ).

ಮತ್ತಾಯ 24:29-31ನ್ನು ವಿವರಿಸುವಾಗ, ಮೂರು ಅಂಶಗಳನ್ನು ನೆನಪನಲ್ಲಿಡಬೇಕು: (1) "ಸಂಕಟ ಕಾಲದ" ನಂತರ ವಚನ 29-31ರ ಘಟನಾವಳಿಗಳು ಕಾರ್ಯಗತವಾಗುತ್ತವೆ, ಅದು ಯೆರೂಸಲೇಮಿನ ನಾಶನ (ವಚನ 29). (2) ವಚನ 34ರ ಆ ಕಾಲದಲ್ಲಿ

ಬದುಕಿದ್ದವರ ಜೀವಿತ ಕಾಲದಲ್ಲೇ ಅವುಗಳು ನೆರವೇರದವು. (3) 29-31ರ ಎರಡನೇ ಬರೋಣವನ್ನು ಹೊರತು ಪಡಿಸಿದ ಘಟನೆಯಾಗಿದೆ. ಇದರಿಂದ ಮತ್ತಾಯ 24:29-31ರ ಅರ್ಥವನ್ನು ಗ್ರಹಿಸಬಹುದಾಗಿದೆ.

*ವಚನ 29:* ಯೆರೂಸಲೇಮಿನ ಹಾಗೂ ದೇವಾಲಯದ ನಾಶನ, ಯೆಹೂದ್ಯ ಜನಾಂಗದ ಅಪಜಯದ ಸೂಚನೆಯಾಗಿದೆ.

*ವಚನ 30ಎ:* "ಮನುಷ್ಯ ಕುಮಾರನು" ಆಲಯದ ನಾಶನದ ಸೂಚನೆ.[26] ಯೆರೂಸಲೇಮಿನ ನಾಶನದ ಮುಂತಿಳಿಸುವಿಕೆ, ಕರ್ತನು ನೀಡಿದ ಗುರುತಾದ ಪ್ರಕಟನೆಯಾಗಿದೆ. ಅದನ್ನು ಆತನ ಕೇಳುಗರು ಕಾಣುವರು.[27] ಈ ನಾಶನದ ನಿಮಿತ್ತ "ಯೇಸುವಿನ ಪ್ರವಾದನೆಯನ್ನು ಪೂರ್ಣವಾಗಿ ನಂಬಬಹುದಾಗಿದೆ." ಆತನು ಮೆಸ್ಸೀಯನಿಗೆ ಸೂಚನೆ, ಆದ್ದರಿಂದ ಆತನನ್ನು ನಂಬಿ, ವಿಧೇಯರಾಗಬಹುದಾಗಿದೆ.

*ವಚನ 30ಬಿ:* ಯೆರೂಸಲೇಮಿನ ನಾಶನಕ್ಕೆ ಲೋಕದ ಜನರು ದುಃಖಿಸುವರು.

*ವಚನ 30ಸಿ:* ಆಗ ಮನುಷ್ಯ ಕುಮಾರನ ಆಗಮನಕ್ಕೆ ಎಲ್ಲರು ಸಿದ್ಧರಾಗುವರು ಆತನು ತನ್ನ ರಕ್ಷಣಾ ಕಾರ್ಯವನ್ನು ಪೂರ್ಣಮಾಡಲು ಬರುವನು. ಆದ್ದರಿಂದ ಯೇಸು, "ಆದರೆ ಇವು ಸಂಭವಿಸುವದಕ್ಕೆ ತೊಡಗುವಾಗ ಮೇಲಕ್ಕೆ ನೋಡಿರಿ. ನಿಮ್ಮ ತಲೆ ಎತ್ತಿರಿ; ನಿಮ್ಮ ಬಿಡುಗಡೆಯು ಸಮೀಪವಾಗಿದೆ ಅಂದನು" (ಲೂಕ 21:28).

*ವಚನ 31:* ಈ ಅಂಶದ ವಿವರಣೆ ಸರಿ ಇರುವದಾದರೆ, ವಚನ 31 ಲೋಕಕ್ಕೆ ಸುವಾರ್ತೆಯನ್ನು ಸಾರುವ ಸೂಚನೆಯಾಗಿದೆ. ಗ್ರೀಕನ "ದೂತರು" ಎಂದರೆ "ಸಂದೇಶ ಕರು" ಎಂಬ ಅರ್ಥವಾಗಿದೆ (ಸುವಾರ್ತಿಕರು) ಅವರು ಲೋಕಕ್ಕೆ ಹೋಗಿ ಕರ್ತನವರನ್ನು ಆಯ್ಕೆ ಮಾಡುವರು (ಸುವಾರ್ತೆ ಕೇಳುವವರನ್ನು). ಮೊದಲ ಸಾರಿ ಇದನ್ನು ಆಲೋಚಿಸುವಾಗ, ನೀವು ಯಾವದೇ ಅರ್ಥವನ್ನು ಗ್ರಹಿಸದೆ ಇರಬಹುದು. ಇದನ್ನು ತಿರಸ್ಕರಿಸುವ ಮೊದಲು ಎರಡು, ಅಂಶಗಳನ್ನು ಗಮನಿಸಿ.

(1) ವಿವರಣೆಗಳು ಕೆಲವು ತಪ್ಪು ಗ್ರಹಿಕೆಗಳನ್ನು ಸರಾಗ ಮಾಡುತ್ತವೆ.[28] (2) ವಿವರಣೆಗಳು, ಸತ್ಯವೇದದಲ್ಲಿರುವ ಇತರೆ ಪ್ರಕಟಣೆಗಳನ್ನು ಒಳಗೊಂಡಿರುತ್ತವೆ, ಇದರಿಂದ ಹೊಸ ಒಡಂಬಡಿಕೆಯಲ್ಲಿನ ಬೋಧನೆಗಳನ್ನು ಸರಳವಾಗಿ ತಿಳಿಯಬಹುದು.

### "ಈ ಜನಾಂಗದಲ್ಲಿ"

### (ಮತ್ತಾಯ 24:32-35; ಮಾರ್ಕ 13:28-31; ಲೂಕ 21:29-36)

ಯೆರೂಸಲೇಮಿನ ನಾಶನದ ಚರ್ಚೆಯನ್ನು ಯೇಸು ಅಂತ್ಯಗೊಳಿಸುವಾಗ, ಅವರಿಗೆ ಒಂದು ಸಾಮ್ಯವನ್ನು ಹೇಳಿದನು (ಲೂಕ 21:29ಎ). ಅಂಜೂರ ಮರದ ದೃಷ್ಟಾಂತ (ಮತ್ತಾಯ 24:32, 33; ಮಾರ್ಕ 13:28, 29; ಲೂಕ 21:29-31). ಇದನ್ನೆಲ್ಲಾ ನೋಡುವಾಗ, ಮತ್ತಾಯ 24:33, ಮಾರ್ಕ 13:30, ಅಂದರೆ ಯೇಸು ಈಗಾಗಲೇ ಹೇಳಿರುವ ಸಂಗತಿಗಳು, ಮುಖ್ಯವಾಗಿ "ಅಸಹ್ಯವಾದ ವಸ್ತು" (ಮತ್ತಾಯ 24:15; ಮಾರ್ಕ 13:14). "ವೈರಿಗಳಿಂದ ಮುತ್ತಿಗೆ ಹಾಕಲ್ಪಟ್ಟ ಯೆರೂಸಲೇಮು" (ಲೂಕ 21:20). ಅಂಜೂರ ಗಿಡವನ್ನು ನೋಡಿ, ಬೇಸಿಗೆ ಹತ್ತಿರವಾಯಿತು ಎಂದು ತಿಳಿಯುವಂತೆ, ಯೆರೂಸಲೇಮಿನ ನಾಶನವು ಸಹ ಹತ್ತಿರವಾಯಿತು ಎಂದು ತಿಳಿಯುವಂತೆ, ಯೆರೂಸಲೇಮಿನ ನಾಶನವು ಸಹ ಹತ್ತಿರವಾಗದೆ.[29] ಆಗ ರೋಮನ್ನರ ಸೈನ್ಯದವರು ಮುತ್ತಿಗೆ ಹಾಕುವರು.

ಈಗ ನಾವು ಮುಖ್ಯಾಂಶಕ್ಕೆ ಬಂದಿದ್ದೇವೆ: "ಇದೆಲ್ಲಾ ಆಗುವ ತನಕ ಈ ಸಂತತಿಯು ಅಳಿದುಹೋಗುವದೇ ಇಲ್ಲವೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ" (ಮತ್ತಾಯ 24:34; ನೋಡಿ ಮಾರ್ಕ 13:30; ಲೂಕ 21:32). "ಈ ಸಂಗತಿಗಳು ಅಂದರೆ" ವಚನದಲ್ಲಿರುವ ವಿಚಾರಗಳೇ (ಮತ್ತಾಯ 24:33): ರೋಮಾ ಸೈನ್ಯದವರು ಯೆರೂಸಲೇಮನ್ನು

ನಾಶಮಾಡುವ ಸಂಗತಿಗಳು.

ಹಿಂದಿನ ಪಾಠದಲ್ಲಿ ಗ್ರೀಕ್‌ನ "ಜನಾಂಗ" ಅಂದರೆ ಒಂದು ಕಾಲದಲ್ಲಿ ಜೀವಿಸಿದ್ದ ಜನರು ಎಂಬ ಅರ್ಥ ಎಂದು ಚರ್ಚಿಸಿದೆವು.[30] ಮತ್ತಾಯನು "ಈ ಜನಾಂಗ" ಎಂದಿರುವನು (ನೋಡಿ 11:16; 12:41, 42).[31] ಕ್ರಿ.ಶ. 70ರಲ್ಲಿ ಯೆರೂಸಲೇಮು ನಾಶವಾಯಿತು. ಯೇಸು ಹೇಳಿದ ನಾಲ್ವತ್ತು ವರ್ಷಗಳ ನಂತರ ಉಂಟಾಯಿತು ಆಗ ಜೀವಿಸಿದ್ದವರು, ಈ ಸಮಯದಲ್ಲೂ ಜೀವಿಸಿದ್ದರು.

ಯೇಸು ಹೇಳಿದ ಯೆರೂಸಲೇಮಿನ ನಾಶವು ಸತ್ಯವಾಯಿತೇ? "ಭೂಮ್ಯಾಕಾಶಗಳು ಅಳಿದು ಹೋಗುವವು, ಆದರೆ ನನ್ನ ಮಾತುಗಳು ಅಳಿದುಹೋಗುವದೇ ಇಲ್ಲ" (ಮತ್ತಾಯ 24:35; ನೋಡಿ ಮಾರ್ಕ 13:31; ಲೂಕ 21:33) ಆತನ ಮಾತಿನ ಮೇರೆಗೆ ಎಲ್ಲವು ನೆರವೇರಿದವು.

## ಎರಡನೆ ಬರೋಣ (ಮತ್ತಾಯ 24:36-51; ಮಾರ್ಕ 13:32-37)

ಮತ್ತಾಯ 24:36ರ ಆರಂಭದಲ್ಲಿ ಯೇಸು *ಇನ್ನೊಂದು* ವಿಷಯ ಪ್ರಸ್ತಾಪಿಸಿದನು. ಇದಕ್ಕೆ ಅನೇಕ ಸೂಚನೆಗಳಿವೆ:[32] (1) ಹೊಸ ಅಂಶವನ್ನು "ಇದಲ್ಲದೆ"[33] ಎಂಬ ಪದದೊಂದಿಗೆ ಪ್ರಸ್ತಾಪಿಸಿದರು: "ಇದಲ್ಲದೆ *ಆ ದಿನದ* ವಿಷಯವೂ ಆ ಗಳಿಗೆಯ ವಿಷಯವೂ ..." (ಮತ್ತಾಯ 24:36; ಒತ್ತಿ ಹೇಳಿದ್ದು ನನ್ನದು; ನೋಡಿ ಮಾರ್ಕ 13:32). (2) "*ಆ ದಿವಸಗಳು*" ಎಂಬ ಬಹು ವಚನ (ಮತ್ತಾಯ 24:22, 29; ನೋಡಿ ಮಾರ್ಕ 13:20, 24). ಮತ್ತು "*ಆ ದಿನ*"ಎಂಬ ಏಕ ವಚನದ ಮದ್ಯೆ ವ್ಯತ್ಯಾಸವುಂಟು (ಮತ್ತಾಯ 24:36; ಒತ್ತಿ ಹೇಳಿದ್ದು ನನ್ನದು; ನೋಡಿ ಮಾರ್ಕ 13:32).[34] (3) ಮತ್ತಾಯ 24:36ರ ವಚನದ ಮುಂಚೆ ಮತ್ತು ತರುವಾಯ ಅನೇಕ ವ್ಯತ್ಯಾಸಗಳಿವೆ.[35] ಉದಾಹರಣೆಯಾಗಿ ಅಧ್ಯಯನದ ಮೊದಲನೆಯ ಭಾಗದಲ್ಲಿ ಯೆರೂಸಲೇಮಿನ ನಾಶನದ "ಸೂಚನೆ" ನೀಡಿರುವನು. (ರೋಮನ್ನರ ಮುತ್ತಿಗೆ "ಸೂಚನೆಯಾಗಿತ್ತು" [ಲೂಕ 21:20].) ನಂತರ, ಎಚ್ಚರಿಕೆಯ ಚರ್ಚೆ. ಅಂದರೆ ಎರಡನೇ ಬರೋಣದ ಘಟನೆ. ಮತ್ತಾಯ 24:36ರ ಪ್ರಶ್ನೆಗಳಿಗೆ ಕರ್ತನ ಮತ್ತಾಯ 24:3ರ ಉತ್ತರ ನೀಡಿರುವನು: "... ಆತನ ಬರೋಣದ ಹಾಗೂ ಯುಗದ ಅಂತ್ಯದ ಸೂಚನೆ?"

### "ಆ ದಿನದ, ಗಳಿಗೆಯ ವಿಚಾರ" (ಮತ್ತಾಯ 24:36-41; ಮಾರ್ಕ 13:32)

ಯುಗದ ಅಂತ್ಯ ಹಾಗೂ ಆತನ ಬರೋಣದ ಸೂಚನೆಗಳನ್ನು ಆತನ ಶಿಷ್ಯರು ಕೇಳಿದ್ದರು. ಆದರೆ ಆತನ ಬರೋಣದ ಸೂಚನೆಯನ್ನು ಆತನು ನೀಡಲಿಲ್ಲ. "ಆ ದಿನದ ವಿಷಯ ಹಾಗೂ ಗಳಿಗೆಯ ಬಗ್ಗೆ ತಂದೆ ಮಾತ್ರ ತಿಳಿದಿರುವನು" (ಮತ್ತಾಯ 24:36; ನೋಡಿ ಮಾರ್ಕ 13:32).[36]

> ಆ ಸಮಯವನ್ನು ಯೇಸು ಅರಿತಿರುವದಿಲ್ಲ ಎಂದು ತಿಳಿಸಿದನು. ಅದನ್ನು ಆತನು ಅರಿಯದಿರುವದರಿಂದ, ಅದರ ಕುರಿತ ಸೂಚನೆಯನ್ನು ಹೇಗೆ ನೀಡುವನು? ಕ್ರಿಸ್ತನು ತನ್ನ ಶಿಷ್ಯರಿಗೆ ಹೇಳಿದ ಸಾರಾಂಶವೇನೆಂದರೆ, ಯೆರೂಸಲೇಮಿನ ಹಾಗೆ ದೇವಾಲಯದ ಕುರಿತ ಸೂಚನೆಗಳಿವೆ, ಆದರೆ ನನ್ನ ಬರೋಣದ ಬಗ್ಗೆ ಮೇಘಗಳೊಡನೆ, ಶಕ್ತಿಯಾದನೆ, ಮಹಿಮೆಯಾದನೆ ನಾನು ಬರುವೆನು ಅಂದನು, ಆದ ವಿಶೇಷ "ಸೂಚನೆ"ಯನ್ನು ನೀಡಲಾರೆನು.[37]

ಯೇಸುವಿನ ಬರೋಣದ ಕುರಿತು ಮುಂಗಡವಾದ ಸೂಚನೆಗಳಿಲ್ಲದಿದ್ದರೂ, ನೋಹನ ದಿನಗಳಲ್ಲಿ ಜನರು, ಇದ್ದಕ್ಕಿದ್ದ ಹಾಗೆ ಪ್ರಳಯವನ್ನು ಎದುರಿಸಿದಂತೆ, ಆತನ ಬರೋಣವಿರುವದು. ಆಗ ಜನರು ಸಿದ್ಧವಿರುವದಿಲ್ಲ. ಆ ದಿನಗಳಲ್ಲಿ:[38] "... ಹೇಗಂದರೆ ಜಲ ಪ್ರಳಯಕ್ಕೆ ಮುಂಚಿನ

ದಿನಗಳಲ್ಲಿ ನೋಹನು ನಾವೆಯಲ್ಲಿ ಸೇರಿದ ದಿನದ ತನಕ ಜನರು ಉಣ್ಣುತ್ತಾ ಕುಡಿಯುತ್ತಾ ಮದುವೆ ಮಾಡಿಕೊಳುತ್ತಾ ಮಾಡಿಕೊಡುತ್ತಾ" (ಮತ್ತಾಯ 24:38; ನೋಡಿ ವಚನಗಳು 37-39).

ತಿನ್ನುವದು, ಕುಡಿಯುವದು ಹಾಗೂ ಮದುವೆಯ ಬಗ್ಗೆ ಕರ್ತನು ಮಾತನಾಡುವಾಗ, ನಾವು ಇಂಥವುಗಳನ್ನು ಮಾಡಬಾರದು ಎಂದು ಹೇಳುತ್ತಿರುವನೇ? ಇಲ್ಲ. *ಆತನ ಬರುವಿಕೆಗಾಗಿ ನಮ್ಮ ಹೃದಯವನ್ನು ಜೀವಿತವನ್ನು ಸಿದ್ಧಪಡಿಸುವುರದಾರೆ ಆತರಹ ಮಾಡುವುದು ಸರಿಯೇ.* ಆತನ ಬರುವ ಕಾಲದಲ್ಲಿ ಹೊಲದಲ್ಲಿ ಕೆಲಸ ಮಾಡುತ್ತಿದ್ದ ಇಬ್ಬರ ನಿದರ್ಶನವನ್ನು ಕರ್ತನು ನೀಡಿರುವನು ಆತನು ಹೀಗೆ ಹೇಳಿದನು, "... ಒಬ್ಬನು ಬಿಡಲ್ಪಟ್ಟು, ಮತ್ತೋಬ್ಬನು ಎತ್ತಲ್ಪಡುವನು" (ಮತ್ತಾಯ 24:40). "ಎತ್ತಲ್ಪಡುವನು" ಎಂದರೆ "ಪರಲೋಕ ದಲ್ಲಿ ದೇವರೊಂದಿಗೆ ಇರಲು ಎತ್ತಲ್ಪಡುವುದು" (ಅಪೊಸ್ತಲರ ಕೃತ್ಯಗಳು 1:2, 11 ಹೋಲಿಸಿ), "ಬಿಡಲ್ಪಟ್ಟನು" ಅಂದರೆ "ದೇವರಿಂದ ನಿತ್ಯವಾದ ನರಕಕ್ಕೆ ಪ್ರತ್ಯೇಕಿಸಲ್ಪಡುವುದು" (2 ಥೆಸಲೋನಿಕ 1:7-9).[39] ನಿದರ್ಶನದಲ್ಲಿರುವ ಅವರಿಬ್ಬರೂ, ಮನುಷ್ಯರು ಮಾಡಬೇಕಾದ ಸಾಮಾನ್ಯ ಕೆಲಸದಲ್ಲೇ ನಿರತರಾಗಿದ್ದರು, ಅದರಲ್ಲಿ ಅವರಲ್ಲಿ ಒಬ್ಬನು ಕರ್ತನಿಗಾಗಿ ಕಾದಿದ್ದನು, ಆದರೆ ಇನ್ನೊಬ್ಬನು ಸಿದ್ಧನಿರಲಿಲ್ಲ.[40] ಹಾಗೆಯೇ ಕೆಲಸ ಮಾಡುತ್ತಿದ ಮಹಿಳೆಯ ನಿದರ್ಶನವನ್ನು ಕರ್ತನು ನೀಡಿದನು (ಮತ್ತಾಯ 24:41).

### "ಎಚ್ಚರವಾಗಿರ್ರಿ" (ಮತ್ತಾಯ 24:42-51; ಮಾರ್ಕ 13:33-37)

ಮತ್ತಾಯ 24:42-51ರಲ್ಲಿ, ನಮಗಾಗಿ ಕರ್ತನು ಒಂದು ತರ್ಕವನ್ನು ಉಳಿಸಿರುವನು: ನಮಗೆ ಆ ಸಂದೇಶದ ಅಗತ್ಯವಿದೆ. ಆತನ ಬರೋಣದ ಸಮಯದ ಅರಿವು ಇಲ್ಲದೆ ಇರುವದರಿಂದ, ನಾವು ಯಾವಾಗಲೂ ಸಿದ್ಧರಾಗಿರೋಣ: "ಹೀಗಿರಲಾಗಿ ನಿಮ್ಮ ಕರ್ತನು ಬರುವ ಸಮಯವು ನಿಮಗೆ ಗೊತ್ತಿಲ್ಲವಾದ್ದರಿಂದ ಎಚ್ಚರವಾಗಿರಿ" (ಮತ್ತಾಯ 24:42; ನೋಡಿ ಮಾರ್ಕ 13:33). ಆತನು ಬರುವ ಸಮಯವು ಕಳ್ಳನು ಬರುವಂಥ ಜಾವದಂತಿರುವದು (ಮತ್ತಾಯ 24:43, 44; ನೋಡಿ 1 ಥೆಸಲೋನಿಕ 5:2; 2 ಪೇತ್ರ 3:10).[41] ತನ್ನ ಸೇವಕನು ಅಪನಂಬಿಗಸ್ತನಾಗಿರುವಾಗ, ಅವನ ಬಳಿಗೆ ಬರುವ ಅವನ ಯಜಮಾನನಂತೆ, ಕರ್ತನ ಬರೋಣವಿರುವದು (ಮತ್ತಾಯ 24:45-51; ನೋಡಿ ಮಾರ್ಕ 13:34).[42] ಪ್ರತಿ ಸೇವಕನಿಗೆ ಯೇಸು ನೀಡಿರುವ ಸಂದಶವೇನೆಂದರೆ:

> ಮನೇಯಜಮಾನನು ಸಂಜೆಯಲ್ಲೋ ಸರುಹೊತ್ತಿನಲ್ಲೋ ಕೋಳಿ ಕೂಗುವಾಗಲೋ ಮುಂಜಾನೆಯಲ್ಲೋ ಯಾವಾಗ ಬರುತ್ತಾನೋ ನಿಮಗೆ ಗೊತ್ತಿಲ್ಲದ ಕಾರಣ ಎಚ್ಚರವಾಗಿರಿ; ಅವನು ಪಕಾಏಕಿ ಬಂದು ನೀವು ನಿದ್ದೆ ಮಾಡುವದನ್ನು ಕಂಡಾನು. ನಾನು ನಿಮಗೆ ಹೇಳಿದ್ದನ್ನು ಎಲ್ಲರಿಗೂ ಹೇಳುತ್ತೇನೆ, ಎಚ್ಚರವಾಗಿರಿ ಅಂದನು (ಮಾರ್ಕ 13:35-37).

ಮತ್ತಾಯ 25ರಲ್ಲಿ ಸಿದ್ದತೆಯ ಬಗ್ಗೆ ಯೇಸು ತಿಳಿಸಿದನು: ಹತ್ತು ಜನ ಕನ್ಯೆಯರಲ್ಲಿ, ಐದು ಜನರು "ಮದಲಿಂಗನಿಗಾಗಿ ಕಾದಿದ್ದರು, ಇತರೆ ಐವರು ಸಿದ್ಧರಿರಲಿಲ್ಲ" (ವಚನಗಳು 1-13). ತಲಾಂತುಗಳ ಸಾಮ್ಯದಲ್ಲಿ ನಾವು ಹೊಂದಿದ ತಲಾಂತುಗಳಿಗಾಗಿ, ನಾವುಗಳೇ ಒಂದು ದಿನ ಲೆಕ್ಕ ನೀಡಬೇಕು (ವಚನಗಳು 14-30). ಮತ್ತಾಯ 25ರಲ್ಲಿ, ಆತನು ಹಿಂದಿರುಗು ವಾಗ ತೀರ್ಪು ಉಂಟಾಗುತ್ತದೆ ಎಂಬ ವಿವರಣೆಯಿಂದ ಅಂತ್ಯಗೊಳಿಸಲಾಗಿದೆ (ವಚನಗಳು 31-46).

## ಮುಕ್ತಾಯ

ಇದು ಅಧ್ಯಾಯ 24ರ ಪಾಠವಾಗಿದೆ. ಗೊಂದಲಮಯವಾದ ಈ ಅಧ್ಯಾಯದಲ್ಲಿ ಕೇಳಲಾಗಿರುವ ಎಲ್ಲಾ ಪ್ರಶ್ನೆಗಳಿಗೆ ನಾನು ಉತ್ತರಿಸಿರುವೆನೇ? ಇಲ್ಲದೆ ಹೋದರೂ ತೀವ್ರವಾದ ಹತ್ತಿಕ್ಕುವ ಕೆಲವು ಅಂಶಗಳನ್ನು ನೀಡಿರುವೆನು. ಧ್ಯಾನದ ನಂತರವೂ ನಿಮ್ಮಲ್ಲಿ ಕೆಲವು ಪ್ರಶ್ನೆಗಳು ಉದ್ಭವಿಸಬಹುದು. ನಾನು ಸಹ ಅದನ್ನೇ ಮಾಡುತ್ತಿದ್ದೇನೆ.

ಅಂದರೆ ಈ ಅಧ್ಯಾಯದಿಂದ ನಾವು ಏನನ್ನು ಕಲಿಯಲಿಲ್ಲ ಎಂಬ ಅರ್ಥವೇ? "ಇಲ್ಲ" ಎಂಬದೇ ಉತ್ತರವಾಗಿದೆ.[43] ಯೆರೂಸಲೇಮಿನ ನಾಶನದ ಬಗ್ಗೆ ಕೆಲವು ಪಾಠಗಳನ್ನು ಕಲಿಯಬಹುದಾಗಿದೆ:

- ನ್ಯಾಯ ತೀರ್ಪಿನಿಂದ ಯಾರೂ ಸಹ ಹೊರತಾಗಿರುವದಿಲ್ಲ.
- ದೇವರು ಹೇಳಿದನ್ನು ನೆರವೇರಿಸುತ್ತಾನೆ.
- ತನ್ನ ಮಾತಿನಂತೆ ಇರುವಾತನಾಗಿದ್ದಾನೆ. ನಾಶನದ ಕುರಿತ ಆತನ ಪ್ರವಾದನೆಯು ನೆರವೇರಿತು. ಆದ್ದರಿಂದ ಪ್ರೇರಿತರಿಂದ ಆತನು ಬರೆಸಿರುವ ಸಕಲ ಸಂಗತಿಗಳಿಗೆ ಕಿವಿಕೊಡೋಣ.

ಎರಡನೇ ಬರೋಣದ ಕುರಿತ ಕೆಲವು ಸತ್ಯಗಳು:

- ಕ್ರಿಸ್ತನು ಬರುತ್ತಾನೆ.
- ಯಾರೂ ನೆನಸದ ಸಮಯದಲ್ಲಿ ಆತನು ಬರುತ್ತಾನೆ.
- ಆತನು ನಮ್ಮನ್ನು ಕುರಿತು (ಮತ್ತಾಯ 25:34)!

---

ಟಿಪ್ಪಣಿಗಳು

[1]"ಆತನು ಅಲ್ಲಿಂದ ಹೊರಟನು (1)" ಎಂಬ ಮುಂದಿನ ಪಾಠವನ್ನು ಪುನರಾವಲೋಕನ ಮಾಡಿ. [2]ಪ್ರಾಥಮಿಕ ಮೂಲಗಳಿಗೆ 1 Maccabees 1:54, 2 Maccabees 6:4, 5; and Josephus *Antiquities* 12.5.4 ನೋಡಿ. [3]ದಾನಿಯೇಲನ ಅಧ್ಯಯನಕ್ಕೆ ಸ್ಥಳಾವಕಾಶವಿರುವದಿಲ್ಲ. [4]ಹಳೇ ಒಡಂಬಡಿಕೆಯಲ್ಲಿ ವಿಗ್ರಹ ಪೂಜೆಯನ್ನು "ಅಸಹ್ಯ" ಎನ್ನಲಾಗಿದೆ. ರೋಮನ್ನರ ಕೆತ್ತಿದ ವಿಗ್ರಹ ಪೂಜೆ ಮಾಡಿದರು. ಈ "ಅಸಹ್ಯದ" ಕುರಿತ ರೋಮನ್ನರು ಹಾಗೂ ಯೆಹೂದ್ಯರ ನಡುವೆ ವಾ ದವಿತ್ತು ಎಂಬುದರ ಬಗ್ಗೆ ಜೋಸಿಫಸ್ ಬರೆದಿದ್ದಾನೆ (*Antiquities* 18.3.1; 18.5.3; *Wars* 6.6.1). [5]David Rechtin, "Daniel's Prophecy of the Seventy Weeks" in "Daniel, 2," *Truth for Today* (June 2001), 23-24. Josephusನ ಉಲ್ಲೇಖನವು *Antiquities* 10.11.7 ಲಿಂದ ತೆಗೆದುಕೊಂಡಲಾಗಿದೆ. [6]ನಿಮಗೆ ಮಕ್ಕಳಿದ್ದರೆ, ಮಕ್ಕಳೊಂದಿಗೆ ಸಕಾಲಕ್ಕೆ ಒಂದು ಸ್ಥಳಕ್ಕೆ ತಲುಪುದು ಒಂದು ಸವಾಲಿನ ದ್ದಾಗಿದೆ ಎಂಬುದರ ಕುರಿತು ಒಂದು ವೈಯಕ್ತಿಕ ನಿದರ್ಶನವನ್ನು ನೀಡಿರಿ. [7]ಯೆಹೂದ್ಯ ಕ್ರೈಸ್ತರ ಮನಸ್ಸಾಕ್ಷಿಯು ಸಬ್ಬತ್ತಿನಲ್ಲಿ ಪ್ರಯಾಣಿಸಲು ಅನುಮತಿ ನೀಡುವದಿಲ್ಲ. [8]ನೋಡಿ Josephus *Wars* 5.10.1. [9]Neale Pryor, "The 'Abomination of Desolation' in Daniel 9:27 & Matthew 24:15-21" in "Daniel, 2," *Truth for Today* (June 2001): 50. See Eusebius *Ecclesiastical History* 3.5. [10]"ಮಹಾಸಂಕಟದ" (ಪ್ರಕಟನೆಗಳು 7:14) ಕುರಿತ ಸಾವಿರ ವರ್ಷದ ಆಳ್ವಿಕೆಯನ್ನು ನಂಬುವವರು ಅಪಾರ್ಥ ಮಾಡಿದ್ದಾರೆ. ಮತ್ತಾಯ 24ರಲ್ಲಿ ಕ್ರಿ.ಶ. 70 ಯೆರೂಸಲೇಮಿನ ನಾಶನ.

[11]"ಆಯ್ದುಕೊಳ್ಳಪಟ್ಟವರು" ಎಂಬುದು ದೇವರ ಕೃಪೆಯಿಂದ ತಪ್ಪಿಸಿಕೊಂಡ ಕ್ರೈಸ್ತರನ್ನು ಸೂಚಿಸುತ್ತದೆ. [12]ಮೆಸ್ಸೀಯನ ತಿರಸ್ಕಾರಕ್ಕೆ ಮುಯ್ಯಿ. [13]ಪ್ರಿಮ್ಲಿಯನ್‌ಲಿಸ್ಟ್‌ರವರು "ಅನ್ಯರ ಕಾಲಗಳನ್ನು" ಉಪಯೋಗಿಸುತ್ತಾರೆ, ಆದರೆ ಕ್ರಿ.ಶ. 70 ರಲ್ಲಿನ ಯೆರೂಸಲೇಮಿನ ನಾಶನದ ಬಗ್ಗೆಯ ಚರ್ಚೆಯಾಗಿದೆ ಎಂದು ಮನಸ್ಸಿನಲ್ಲಿಟ್ಟು ಕೊಳ್ಳಬೇಕು. ಅನೇಕ ಸಾಧ್ಯತೆವುಳ್ಳ ವ್ಯಾಖ್ಯಾನಗಳು ಕೊಡಲ್ಪಟ್ಟಿವೆ; ಆದರೆ ರೋಮಾಲಿಂದ (ಮುಟ್ಟಡಿ ಮಾಡುವಾಗ) ಯೆರೂಸಲೇಮು "ಕಾಲ್ತುಳಿತಕ್ಕೆ ಒಳಗಾಗುವದು" ಎಂಬುದು ಸರಳ ವಿವರಣೆ, ದೇವರ ಸಂಕಲ್ಪ ಮತ್ತು ಉದ್ದೇಶದಲ್ಲಿ, ಪಟ್ಟಣದ ಸಂಪೂರ್ಣ ನಾಶನದಲ್ಲಿ ಕಾಲವು ನೆರವೇಲಿಸಲ್ಪಟ್ಟಿತು. [14]ಸ್ವಲ್ಪ ಕಾಲದ ಮುಟ್ಟಡಿಯಲ್ಲೆ ಜನರು ಭಯಕಂರವಾದವುಗಳನ್ನು

ಮಾಡಿದರೆಂಬುದಕ್ಕೆ ಉದಾಹರಣೆಗಳಿಗಾಗಿ ನೋಡಿ 2 ಅರಸು 6:24-30. [15]ಯೋಸೇಫಸನ ಪ್ರಕಾರ ಮುತ್ತಿಗೆಯ ಸಮಯದಲ್ಲಿ 1,100,000 ಜನರು ಸತ್ತರು ಮತ್ತು 97,000 ಸೆರೆಯಾಳಾದರು (*Wars* 6.9.3). ಏನೇ ಆಗಿದ್ದರು ಆಧುನಿಕ ಕಾಲದ ಪಂಡಿತರು ಜೋಸೇಫಸ್‌ನು ಅತಿಶಯೋಕ್ತಿಯಾಗಿ ಹೇಳಿದನೆಂದು ನಂಬುವರು. [16]Josephus *Wars* 5.11.1. [17]J. Norval Geldenhuys, "Luke," *The Biblical Expositor,* ed. Carl F. H. Henry (Philadelphia: Holman, 1960), 3:141. [18]ದೇವಾಲಯದ ಚಿನ್ನದ ಕುರಿತು ಹಿಂದಿನ ಪಾಠ ನೋಡಿರಿ. [19]David Rechtin, "Daniel's Prophecy of the Seventy Weeks" in "Daniel, 2," *Truth for Today* (June 2001): 23-24. Brother Rechtin gave a reference for this detail: Harry Thomas Frank, *An Archaeological Companion to the Bible* (London: SCM Press, 1972), 249. [20]ಕ್ರೈಸ್ತನ ಕಾಲದ ಯೆರೂಸಲೇಮಿನ ಹಲವು ಗೋಡೆಗಳು ಮಾತ್ರ ಇವೆ, ಅದರಲ್ಲಿ ಪ್ರಸಿದ್ಧಿಯಾದ "ದುಃಖಿಸುವ ಗೋಡೆ" ಸೇರಿದೆ. ಯೆಹೂದ್ಯರ ದೇವಾಲಯದ ಸ್ಥಳದಲ್ಲಿ "ಡೂಮ್ ಆಫ್ ರಾಕ್" ಎಂಬ ಮಸೀದಿ ಇರುತ್ತದೆ.

[21]ಮತ್ತಾಯ 24:24 ಗಮನಾರ್ಹವಾದದ್ದು: ಸುಳ್ಳು ಕ್ರೈಸ್ತರು "ಅದ್ಭುತಗಳನ್ನೂ, ಸೂಚನೆಗಳನ್ನೂ ಮಾಡಿ ಜನರನ್ನು ತಪ್ಪಿನ ದಾರಿಗೆ ನಡೆಸುವರು, ಸಾಧ್ಯವಾದರೆ ಆಯ್ದುಕೊಂಡವರನ್ನು [ಕ್ರೈಸ್ತರನ್ನು] ಸಹ." "ಅದ್ಭುತಗಳು ಮಾಡುವದಕ್ಕೆ" ಸಾಮರ್ಥ್ಯವಿರುವದೆಂಬುದು ಸೂಚನೆಯಲ, ಅದನ್ನು ಮತ್ತು ಅದರಲ್ಲಿ ದೇವರು ಸಮ್ಮತ್ತಿಸಿದ್ದಾಗಿರಬೇಕು. ಉಪದೇಶಕನ ಜೀವಿತ ಮತ್ತು ಉಪದೇಶ ದೇವವಾಣಿಗೆ ಒಪ್ಪಿಗೆಯಂತದ್ದಾಗಿರಬೇಕು. [22]ಮತ್ತಾಯ 24:27 ಕ್ರಿಸ್ತನು ಯೆರೂಸಲೇಮಿಗೆ ತೀರ್ಪು ನೀಡಲು ಬರುತ್ತಾನೆ ಎಂದು ತಿಳಿದರೂ; ಆತನು ವ್ಯಕ್ತಿಗತ ಬರಲಿದ್ದಾನೆ. ಅದು ಎಲ್ಲರಿಗೂ ಸಹಜವಾಗಿದೆ - ಇದು ಎರಡನೆಯ ಬರುವಿಕೆಯಾಗಿದೆ. ಯೇಸು ಇಲ್ಲಿ ಅಥವಾ ಅಲ್ಲಿ ಎಂಬ ವ್ಯತ್ಯಾಸಗಳಿಂದ ನಿಜವಾಗಿ ಎರಡನೆಯ ಬರುವಿಕೆ ಸಂಭವಿಸಿದಾಗ ಅದು ಎಲ್ಲರಿಗೂ ಸ್ಪಷ್ಟವಾಗಿರುತ್ತದೆ. [23]ಇದು ಅಕ್ಷರಶಃ ಸತ್ಯವಾಗಿದೆ. ರೋಮಾನ್ನರ ಮುತ್ತಿಗೆಯ ಸಮಯದಲ್ಲಿ ರಣ ಹದ್ದುಗಳು ಹೆಚ್ಚಾದವು ಎಂದು ಒಬ್ಬರು ಬರೆದಿರುವರು. ಗ್ರೀಕ್ ಪದವು "ಹದ್ದು" ಎಂದು "ರಣ ಹದ್ದು" ಎಂಬ ಪದವನ್ನು ಭಾಷಾಂತರಿಸಿದ್ದಾರೆ. ರೋಮಾನ್ನರ ಸಂಕೇತದಲ್ಲಿರುವ ಹದ್ದನ್ನು ಕರ್ತನು ಸೂಚಿಸಿದ್ದಾನೆಂದು ಅವರು ಆಲೋಚಿಸಿದ್ದಾರೆ. [24]ಕಡೇಯ ಪಾಠದಿಂದ ನೋಡಿರಿ. [25]ಯೋವೇಲ 2:28-32ರಲ್ಲಿ ಇದೇ ವಿಧದ ಶೈಲಿಯನ್ನು ಬಳಸಿದೆ. ಇದನ್ನು ಅಪೊಸ್ತಲರ ಕೃತ್ಯಗಳು 2:16-21 ರಲ್ಲಿ ಉಲ್ಲೇಖಿಸಲಾಗಿದೆ, ಹೊಸ ಒಡಂಬಡಿಕೆಯ ಆರಂಭಕ್ಕೆ ಸಂಬಂಧಿಸಿದೆ. [26]"ಆಕಾಶದಲ್ಲಿ" ಎಂದರೆ ಅದು ದೇವರ ಸೂಚನೆ. [27]ಕ್ರಿ.ಶ. 70ರ ಕ್ಕಿಂತ ಮುಂಚಿತವಾಗಿಯೇ ಸುವಾರ್ತೆಗಳು ಬರೆಯಲ್ಪಟ್ಟವು. [28]ಯೆರೂಸಲೇಮಿನ ನಾಶನ ಅಥವಾ ಎರಡನೆ ಬರೋಣ ಎಂಬುದನ್ನು ಅನುವಾದಕರಿಗೆ ಬಿಡಲಾಗಿದೆ. [29]"*ಆತನು* ಬರುವಿಕೆ ಸಮೀಪವಾಯಿತು" ಎಂದು ಮತ್ತಾಯ ಹಾಗೂ ಮಾರ್ಕನಲ್ಲಿದೆ (ಮತ್ತಾಯ 24:33; ಮಾರ್ಕ 13:29; ಒತ್ತಿ ಹೇಳಿದ್ದು ನನ್ನದು) - ಕರ್ತನು ಯೆರೂಸಲೇಮಿನ ತೀರ್ಪಿಗೆ "ಬರುತ್ತಾನೆ" ಎಂಬುದನ್ನು ಗುರುತಿಸಿ. ಲೂಕನ ಪ್ರಕಾರ, "*ದೇವರ ರಾಜ್ಯ* ಸಮೀಪವಾಯಿತು" (ಲೂಕ 21:31; ಒತ್ತಿ ಹೇಳಿದ್ದು ನನ್ನದು). "ರಾಜ್ಯ" ಎಂದರೆ ಸಭೆ ಹಾಗೂ ಪರಲೋಕ ಎಂದು ಹೊಸ ಒಡಂಬಡಿಕೆಯಲ್ಲಿ ಸಾಮಾನ್ಯವಾಗಿ ಬಳಸಲಾಗಿದೆ. ಯೆರೂಸಲೇಮಿನ ನಾಶನದ ಸಮಯದಲ್ಲಿ ಸಭೆ ಇರಲಿಲ್ಲ ನಲವತ್ತು ವರ್ಷಗಳ ನಂತರ ಸಭಾಸ್ಥಾಪನೆಯಾಯಿತು, ಆದ್ದರಿಂದ ಇದು "ಸಭೆಯ" ಕುರಿತಾಗಿರುವದಿಲ್ಲ, "ಪರಲೋಕ" (ಲೋಕದ ಅಂತ್ಯ), ಎಂದು ಒಬ್ಬನು ವ್ಯಾಖ್ಯಾನಿಸಿದರೆ ಮುಂಬರುವ ವಚನದೊಂದಿಗೆ ಸಮಸ್ಯೆ ಉಂಟಾಗುವುದು, "ಎಲ್ಲಾ ಆಗುವ ತನಕ ಈ ಸಂತತಿಯು ಅಳಿದು ಹೋಗುವುದಿಲ್ಲ" ಎಂದು ಹೇಳುತ್ತದೆ (ಲೂಕ 21:32). "ಸಂತತಿ" ಎಂಬುದನ್ನು ಮತ್ತೊಂದು ತರಹ ವ್ಯಾಖ್ಯಾನಿಸಿ ಈ ಸಮಸ್ಯೆಯನ್ನು "ಪರಿಸ್ಕರಿಸಲು" ನೋಡುವರು. ("ಸಂತತಿ" ಎಂಬ ಪದದ ಅರ್ಥವನ್ನು ಈ ಪಾಠದಲ್ಲಿ ಮತ್ತು ಹಿಂದಿನ ಪಾಠದಲ್ಲಿ ಚರ್ಚಿಸಲಾಗಿದೆ.) "ರಾಜ್ಯ" ಎಂಬುದರ ಪ್ರಥಮಿಕ ಅರ್ಥವನ್ನು ತೆಗೆದುಕೊಳ್ಳುವದರಿಂದ ಈ ಸಮಸ್ಯೆಯನ್ನು ಬಗೆ ಹರಿಸಬಹುದು: "ದೇವರ ಆಡಳಿತ ಮಾನವನ ಹೃದಯದಲ್ಲಿದೆ. ಸುವಾರ್ತೆಯ ಜನರನ್ನು ದೇವ ಜನರನ್ನಾಗಿ ಮಾಡುತ್ತದೆ." ಈ ವಚನವನ್ನು ಸುವಾರ್ತೆ ಸಾರುವುದಕ್ಕೂ ಮತ್ತು ಅದು ಜನರನ್ನು ರಾಜ್ಯದ ಪೌರರನ್ನಾಗಿ ಮಾಡುವುದ ರೊಂದಿಗೆ ಸಂಬಂಧಿಸಿ ಹೇಳಬಹುದು (ಕೊಲಸ್ಸೆ 1:13). [30]ಮತ್ತಾಯನಲ್ಲಿ "ಜನಾಂಗ" ಎಂಬ ಪದವನ್ನು 13 ಬಾರಿ ಬಳಸಲಾಗಿದೆ (1:17; 11:16; 12:39, 41, 42, 45; 16:4; 17:17; 23:36; 24:24); ಅದು ಮನುಷ್ಯನ ಜೀವಿತದ ಕಾಲವನ್ನು ಸೂಚಿಸುತ್ತದೆ.

[31]F. Furman Kearley, "An Exegesis of Matthew 24," *Abilene Christian University Lectures* (1980): 130. [32]ಸ್ತ್ರೀ ಪುರುಷರು ಪರಲೋಕ ಅಥವಾ ನರಕಕ್ಕೆ (ಮತ್ತಾಯ 25:46) ಹೋಗುವುದಾಗಿದೆ ಎಂದು ಮತ್ತಾಯ 25:36 ಎಂಬುದನ್ನು ಪರಿಚಯಿಸುತ್ತಿದೆ. ಯೆರೂಸಲೇಮಿನ

ನಾಶಮಾಡಿದಾಗ ಇದು ಸಂಭವಿಸಿಲ್ಲ. [33]“ಆದರೆ” ಎಂಬುದಕ್ಕೆ ಗ್ರೀಕ್ ಪದ *de*. [34]“ತೀರ್ಪಿನ ದಿನಕ್ಕೆ” ಮತ್ತಾಯದಲ್ಲಿ ಮತ್ತೊಂದೆಡೆ “ಆ ದಿನ” ಎನ್ನಲಾಗಿದೆ (7:22). [35]“ಚಾರ್ಟ್ 2: ಮತ್ತಾಯ 24 ವ್ಯತ್ಯಾಸಗಳು” ಚಾರ್ಟ್‌ನ್ನು ನೋಡಿ. [36]ಮತ್ತಾಯ 24:36ರನ್ನು ಯೇಸು ದೈವೀಕವಾದ ವಿಶೇಷ ಅಧಿಕಾರಗಳೆಲ್ಲವನ್ನು ಬಿಟ್ಟು ಮಾನವನಾದನು ಎಂಬುದಕ್ಕೆ ಉದಾಹರಣೆಯಾಗಿ ಉಪಯೋಗಿಸಬಹುದು (ಫಿಲಿಪ್ಪಿ 2:6, 7). [37]Kearley, 131-32. [38]ಪ್ರವಾಹ ಬರುವದೆಂದು ನೋಹನು ಹೇಳಿದರು, ಜನರು ನಂಬಲಿಲ್ಲ. ಅವರು ತಮ್ಮ ಸಾಮಾನ್ಯ ಕಾರ್ಯದಲ್ಲಿ ಮುಂದುವರೆಸುತ್ತಿದ್ದರು. ಈ ದಿನ, ಕರ್ತನು ಬರುವನೆಂದು ಬೈಬಲ್ ಬೋಧಿಸುತ್ತಿದ್ದರು, ವಾಕ್ಯದ ಎಚ್ಚರಿಕೆಗಳನ್ನು ಅನೇಕರು ನಿರ್ಲಕ್ಷಮಾಡುತ್ತಿದ್ದಾರೆ. ಆದ್ದರಿಂದ ಅವರು ಸಿದ್ಧತೆಯಿಲ್ಲದಂತೆಯೇ ಹಿಡಿಯಲ್ಪಡುವರು. [39]“ಎತ್ತಲ್ಪಡುವಿಕೆ” (Rapture) ಎಂಬುದನ್ನು ಬೋಧಿಸುವದಕ್ಕೆ ಮತ್ತಾಯ 24:40, 41ನ್ನು ಪ್ರಿಮ್ಲಿಯನ್‌ಅಸ್ಟ್ ಬಳಸುವರು. [40]ಇದು ಸ್ಪಷ್ಟವಾಗಿ ಅಡಗಿದೆ.

[41]ಕರ್ತನ ಬರುವಿಕೆಯ ಕಾಲವನ್ನು ಹೇಳಲು ಪ್ರಯತ್ನಿಸುವವರು ಮತ್ತಾಯ 24:44ರನ್ನು ತಮ್ಮ ಹೃದಯಗಳಿಂದ ಸ್ವೀಕರಿಸಬೇಕು. ಅವರು “ಕಾಲದ ಸೂಚನೆಗಳನ್ನು” ನೋಡಬಹುದೆಂದು ಯೋಚಿಸುತ್ತಾರೆ, ಮತ್ತು ಆತನ ಬರುವಿಕೆ ಸಮೀಪದಲ್ಲಿದೆ ಎಂದು ಭವಿಷ್ಯವನ್ನು ನುಡಿಯುತ್ತಾರೆ, ಆದರೆ “*ನೆನಸದ* ಗಳಿಯಲ್ಲಿ ಮನುಷ್ಯ ಕುಮಾರನು ಬರುತ್ತಾನೆ”! (ಒತ್ತಿ ಹೇಳಿದ್ದು ನನ್ನದು.) Stafford North ರವರು ಎರಡನೇಯ ಬರುವಿಕೆಯ ಬಗ್ಗೆ ಮಾತನಾಡುವಾಗ “ರಾತ್ರಿಯಲ್ಲಿ ಕಳ್ಳನು ಬರುವ ಹಾಗೆ” ಎಂಬುದನ್ನು ಒತ್ತಿ ಹೇಳಿದ್ದರು. ಈ ಮಾತುಗಳನ್ನು ಅನೇಕ ಸಾರಿ ಗಟ್ಟಿಯಾಗಿ ಕೇಳುಗರಿಂದ ಹೇಳಿಸಿದರು. [42]“ನಂಬಿಗಸ್ತ ಹಾಗೂ ಅಪನಂಬಿಗಸ್ತರಾದ” ಸೇವಕರ ಸಾಮ್ಯವೆಂದು ಸಾಮಾನ್ಯವಾಗಿ ಕರೆಯಲಾಗಿದೆ. [43]Robertson wrote, “… ಯೇಸು ನಮಗೆ ಕೊಟ್ಟಿರುವ ಅಚ್ಚರಿಕೆಗಳ ಮೇಲೆ ಮತ್ತು ಕಾಲದ ವಿವರಗಳ ಮೇಲೆ ಸಂಪೂರ್ಣ ವಿವರಗಳಿಗಾಗಿ ನೋಡದೆ ಯೇಸುವಿನ ಬೋಧನೆಗಳಿಂದ ದೂರವಾಗುವ ಸಾಮಾನ್ಯ ವಿಷಯವನ್ನು ನೋಡಲು ಪ್ರಯತ್ನಿಸೋಣ” (A. T. Robertson, *A Harmony of the Gospels for Students of the Life of Christ* [New York: Harper & Row, 1950], 173).